# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೪, ಅಕ್ಟೋಬರ್, ೨೦೨೫ (ಆಶ್ವಯುಜ , ೨೨, ಶಕವರ್ಷ, ೧೯೪೭)<br>BENGALURU, TUESDAY, 14, OCTOBER, 2025 (AASHWAYUJA , 22, SHAKAVARSHA, 1947) | ನಂ. ೬೫೨<br>No. 652 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ(ಆಸು) 23 ಇಆತ 2024

ಕರ್ನಾಟಕ ಸರ್ಕಾರ ಸಚಿವಾಲಯ,<br>ಬಹುಮಹಡಿ ಕಟ್ಟಡ,<br>ಡಾ: ಬಿ.ಆರ್. ಅಂಬೇಡ್ಕರ್ ವೀಧಿ,<br>ಬೆಂಗಳೂರು, ದಿನಾಂಕ: 14-10-2025.

## <u>ಅಧಿಸೂಚನೆ</u>

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಕಾಯ್ದೆ, 1978 (1990 ರ ಕರ್ನಾಟಕ ಕಾಯ್ದೆ 14) ರ ಪ್ರಕರಣ 8ರ ಜೊತೆ ಓದಲಾದ ಪ್ರಕರಣ 3ರ ಉಪ ಪ್ರಕರಣ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು, 2025ರ ಕರಡನ್ನು ಮೇಲೆ ಉಲ್ಲೇಖಿಸಿದ ಕಾಯ್ದೆಯ ಪ್ರಕರಣ 3ರ ಉಪ ಪ್ರಕರಣ (2)ರಲ್ಲಿ ಅಗತ್ಯಪಡಿಸಿರುವಂತೆ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಿದೆ ಮತ್ತು ಅದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಸದರಿ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ, ಸದರಿ ಕರಡುಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆಗಳು), ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001 ಇವರಿಗೆ ಕಳುಹಿಸಬಹುದು.

## <u>ಕರಡು ನಿಯಮಗಳು</u>

1. **<u>ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ</u>**:- (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಮುಂಬಡ್ತಿಗಾಗಿ ತರಬೇತಿ ಕಡ್ಡಾಯ) ನಿಯಮಗಳು, 2025 ಎಂದು ಕರೆಯತಕ್ಕದ್ದು. (2) ಈ ನಿಯಮಗಳು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು. (3) ಅನ್ವಯ: ಈ ನಿಯಮಗಳು ರಾಜ್ಯದ ನಾಗರಿಕ ಸೇವೆಗಳಲ್ಲಿ ಗ್ರೂಪ್-ಎ, ಗ್ರೂಪ್-ಬಿ ಮತ್ತು ಗ್ರೂಪ್-ಸಿ ಹುದ್ದೆಗಳನ್ನು ಒಳಗೊಂಡಿರುವ ವೃಂದಗಳಲ್ಲಿ ಹುದ್ದೆಗಳನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಅನ್ವಯಿಸುತ್ತವೆ ಮತ್ತು ಗ್ರೂಪ್-ಸಿ ಯಲ್ಲಿ ಚಾಲಕರ ಹುದ್ದೆಗಳನ್ನು ಹೊಂದಿರುವವರಿಗೆ ಮತ್ತು ಗ್ರೂಪ್-ಡಿ ಹುದ್ದೆಗಳನ್ನು

ಹೊಂದಿರುವವರಿಗೆ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆ ಮಾಡಬಹುದಾದ ಇತರ ಹುದ್ದೆಗಳನ್ನು ಹೊಂದಿರುವವರಿಗೆ ಈ ನಿಯಮಗಳು ಅನ್ವಯಿಸತಕ್ಕದ್ದಲ್ಲ.

ಪರಂತು, ನಿಯಮ 4 ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತರಬೇತಿಯ ಅಧಿಸೂಚನೆಯ ದಿನಾಂಕದಿಂದ ಎರಡು ವರ್ಷಗಳೊಳಗೆ ವಯೋ ನಿವೃತ್ತಿ ಹೊಂದಲಿರುವ ಸರ್ಕಾರಿ ನೌಕರರಿಗೆ ಈ ನಿಯಮಗಳಲ್ಲಿರುವ ಯಾವುದೂ ಅನ್ವಯಿಸತಕ್ಕದ್ದಲ್ಲ.

**2. ವ್ಯಾಖ್ಯಾನಗಳು:** (1) ಈ ನಿಯಮಗಳಲ್ಲಿ, ಸಂದರ್ಭವು ಬೇರೆ ರೀತಿಯಲ್ಲಿ ಅಗತ್ಯಪಡಿಸದ ಹೊರತು,-

(i) "ಸರ್ಕಾರ" ಎಂದರೆ ಕರ್ನಾಟಕ ಸರ್ಕಾರ;

(ii) "ತರಬೇತಿ" ಎಂದರೆ, ತರಬೇತಿಯ ಕೋರ್ಸ್, ನಿಯಮ 4 ಮತ್ತು 5 ರ ಅಡಿಯಲ್ಲಿ ಅಧಿಸೂಚಿಸಿದಂತೆ ಆಫ್‌ಲೈನ್ ಅಥವಾ ಆನ್‌ಲೈನ್ ಅಥವಾ ಹೈಬ್ರಿಡ್ ತರಬೇತಿ

(2) **ಪ್ರಸ್ತಾಪಿತ ಕರಡು ನಿಯಮಗಳಲ್ಲಿ ಬಳಸಲಾದ ಮತ್ತು ಪರಿಭಾಷಿಸದೇ ಇರುವ ಪದಗಳಿಗೆ ಕರ್ನಾಟಕ ಸಿವಿಲ್ ಸೇವಾ** (**ವರ್ಗೀಕರಣ**, **ನಿಯಂತ್ರಣ ಮತ್ತು ಅಪೀಲು**) **ನಿಯಮಗಳು**, 1957 **ರಲ್ಲಿ ಪರಿಭಾಷಿಸಿರುವಂತೆ ಅನ್ವಯಿಸತಕ್ಕದ್ದು**.

**3. ಹೆಚ್ಚುವರಿ ಅರ್ಹತೆಯಾಗಿ ನಿರ್ದಿಷ್ಟ ತರಬೇತಿ.-** ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ನಿರ್ದಿಷ್ಟ ತರಬೇತಿಯನ್ನು ಪೂರ್ಣಗೊಳಿಸುವುದನ್ನು ಬಡ್ತಿಗೆ ಅಗತ್ಯವಾದ ಅರ್ಹತೆಯಾಗಿ ನಿಗದಿಪಡಿಸಿ ವಿಶೇಷವಾಗಿ ರಚಿಸಲಾದ ನೇಮಕಾತಿ ನಿಯಮಗಳಿಗೆ ಹೆಚ್ಚುವರಿಯಾಗಿ ಈ ನಿಯಮಗಳು ಇರತಕ್ಕದ್ದು. ನಿಯಮ 4 ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತರಬೇತಿಯನ್ನು ಅಧಿಸೂಚನೆಯ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಯಾವುದೇ ಸರ್ಕಾರಿ ನೌಕರನು ಬಡ್ತಿಗೆ ಅರ್ಹನಾಗತಕ್ಕದ್ದಲ್ಲ.

**ವಿವರಣೆ:** ಈ ನಿಯಮಗಳು ಪ್ರಾರಂಭವಾದ ದಿನಾಂಕ ಮತ್ತು ನಿಯಮ 4 ರ ಅಡಿಯಲ್ಲಿ ತರಬೇತಿಗೆ ಸಂಬಂಧಿಸಿದ ಅಧಿಸೂಚನೆಯನ್ನು ಹೊರಡಿಸುವ ದಿನಾಂಕದ ನಡುವೆ ಬಡ್ತಿಯ ಸಂದರ್ಭ ಉಂಟಾದಲ್ಲಿ, ಈ ನಿಯಮಗಳ ಅಡಿಯಲ್ಲಿ ತರಬೇತಿಯನ್ನು ಉಲ್ಲೇಖಿಸದೆ ಬಡ್ತಿಗಳನ್ನು ಜಾರಿಗೆ ತರಬಹುದು.

**4. ತರಬೇತಿಯ ನಿಗದಿಪಡಿಸುವಿಕೆ**: ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಮೂರು ತಿಂಗಳೊಳಗೆ, ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರು, ವಿವಿಧ ವೃಂದಗಳಲ್ಲಿನ ಹುದ್ದೆಗಳಿಗೆ ಅನ್ವಯವಾಗುವ ಕರ್ತವ್ಯಗಳ ಸ್ವರೂಪ, ಸರ್ಕಾರವು ಹೊರಡಿಸಿದ ವಿವಿಧ ಶಾಸನಗಳು, ನಿಯಮಗಳು, ವಿನಿಯಮಗಳು, ಕಾರ್ಯಕಾರಿ ಆದೇಶಗಳು, ಇತ್ಯಾದಿಗಳು ಮತ್ತು ಪ್ರತಿಯೊಂದು ವೃಂದದಲ್ಲಿನ ಹುದ್ದೆಗಳಿಗೆ ಅನ್ವಯಿಸಲಾದ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಕ್ಷೇತ್ರ ಜ್ಞಾನವನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚನೆಯ ಮೂಲಕ, ಅಂತಹ ಪ್ರತಿಯೊಂದು ಗ್ರೂಪ್-ಎ, ಬಿ ಮತ್ತು ಸಿ ವೃಂದಕ್ಕೂ ಕ್ರಮವಾಗಿ ತರಬೇತಿ ಕೋರ್ಸ್‌ಗಳನ್ನು ನಿಗದಿಪಡಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಇಲಾಖೆಯ ಮುಖ್ಯಸ್ಥರು ಅಗತ್ಯವೆಂದು ಭಾವಿಸುವ ವ್ಯಕ್ತಿಗಳನ್ನು ಒಳಗೊಂಡ ಸಲಹಾ ಸಮಿತಿಗಳನ್ನು ರಚಿಸಬಹುದು ಮತ್ತು ತರಬೇತಿಗಾಗಿ ಕೋರ್ಸ್‌ಗಳ ಪಟ್ಟಿಯನ್ನು ರೂಪಿಸತಕ್ಕದ್ದು. ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಲು ಮತ್ತು ಆ ಇಲಾಖೆಗೆ ನಿರ್ದಿಷ್ಟವಾದ ಕ್ಷೇತ್ರಗಳಿಗೆ ಆನ್‌ಲೈನ್ ತರಬೇತಿ ಕೋರ್ಸ್ ಗಳನ್ನು ರಚಿಸಲು ಮತ್ತು ಅಗತ್ಯವಿರುವಂತೆ ಆಫ್‌ಲೈನ್ ತರಬೇತಿಯನ್ನು ನಡೆಸಲು ಅಗತ್ಯವಾದ ವ್ಯವಸ್ಥೆಗಳನ್ನು ಮಾಡಲು ಇಲಾಖೆಗಳ ಮುಖ್ಯಸ್ಥರು ಜವಾಬ್ದಾರರಾಗಿರುತ್ತಾರೆ. ಬಡ್ತಿಯ ಹಿಂದಿನ ವರ್ಷದಲ್ಲಿ, ಅಧಿಸೂಚನೆಯಂತೆ ಕನಿಷ್ಠ ಹತ್ತು ದಿನಗಳ ಆಫ್‌ಲೈನ್ ತರಬೇತಿಯನ್ನು ಪಡೆದಿಲ್ಲದಿದ್ದರೆ, ಯಾವುದೇ ಸರ್ಕಾರಿ ಉದ್ಯೋಗಿ ಮುಂದಿನ ವೃಂದಕ್ಕೆ ಬಡ್ತಿ ಪಡೆಯಲು ಅರ್ಹನಾಗತಕ್ಕದ್ದಲ್ಲ.

5. **ಆನ್‌ಲೈನ್ ತರಬೇತಿ.-** ಆಫ್‌ಲೈನ್ ತರಬೇತಿಯೊಂದಿಗೆ, ಪ್ರತಿಯೊಬ್ಬ ಸರ್ಕಾರಿ ಉದ್ಯೋಗಿಯು ಅಧಿಸೂಚಿತ ಆನ್‌ಲೈನ್ ತರಬೇತಿ ಕೋರ್ಸ್‌ಗಳನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕು ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ) ಸೂಚಿಸಿದಂತೆ ಆನ್‌ಲೈನ್ ಕಲಿಕಾ ವೇದಿಕೆಯಲ್ಲಿ ಪ್ರತಿ ವರ್ಷ ಕನಿಷ್ಠ ಸಂಖ್ಯೆಯ ಅಂಕಗಳನ್ನು ಗಳಿಸಬೇಕು.

6. **ತರಬೇತಿಯ ಆದ್ಯತೆ.-** ಪ್ರತಿಯೊಬ್ಬ ಸರ್ಕಾರಿ ಉದ್ಯೋಗಿಯು ನಿಯಮ 4 ಮತ್ತು ನಿಯಮ 5ರ ಪ್ರಕಾರ ತರಬೇತಿ ಪಡೆಯಬೇಕಾದ ಸಂಸ್ಥೆಗೆ Integrated Government Online Training (iGOT) ವೇದಿಕೆಯ ಮೂಲಕ ಖುದ್ದು (In person) ತರಬೇತಿಗಾಗಿ ಅರ್ಜಿ ಸಲ್ಲಿಸಬೇಕು. ಸಂಬಂಧಪಟ್ಟ ಸರ್ಕಾರಿ ನೌಕರರು ನಿಯಮ 4ರಲ್ಲಿ ಸೂಚಿಸಿದಂತೆ ಆಫ್‌ಲೈನ್ ತರಬೇತಿಗಾಗಿ ಅರ್ಜಿ ಸಲ್ಲಿಸಿದ್ದರೆ, ಅವರನ್ನು ಅವರ ವೃಂದದ ಜೇಷ್ಠತೆಯ ಕ್ರಮದಲ್ಲಿ ತರಬೇತಿಗಾಗಿ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಹೀದ್ ಅಂಜುಮ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಆಸು-ತರಬೇತಿ ಮತ್ತು ಮಾಹಿತಿ ಹಕ್ಕು)

**GOVERNMENT OF KARNATAKA**

No. DPAR (AR) 23 KTP 2025

Karnataka Government Secretariat,
M.S. Building,
Dr: B.R. Ambedkar Veedhi,
Bengaluru, dated:14-10-2025.

**NOTIFICATION**

The draft of the Karnataka State Civil Services (Mandatory Training for Promotion) Rules, 2025, which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), is hereby published as required by sub-section (2) of section 3 of the said Act for the information of all the persons likely to be effected thereby and notice is hereby given that the said draft will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before expiry of the period specified above will be considered by the State Government. Objections or suggestions may be addressed to the Secretary to Government, Department of Personnel and Administrative Reforms (Administrative Reforms), M.S. Building, Dr.B.R Ambedkar Veedhi, Bengaluru-560001.

**DRAFT RULES**

**1. Title, commencement and application.-** (1) These rules may be called the Karnataka State Civil Services (Mandatory Training for Promotion) Rules, 2025.

(2) They shall come into force from the date of their final publication in the Official Gazette.

(3) These rules shall apply to Government servants holding posts in the civil services of the State in cadres comprising of Group-A, Group-B and Group-C posts and nothing in these rules shall apply to those holding posts of drivers in Group-C and those holding posts in Group-D and such other posts as may be specified by the Government from time to time:

Provided that, nothing in these rules shall apply to a Government servant who is due to retire on attaining the age of superannuation within two year from the date of commencement of these rules.

**2. Definitions.-** (1) In these rules, unless the context otherwise requires,

(i) "Government" means, the Government of Karnataka;
(ii) "Training" means the course of training, offline, online or hybrid as notified under rules 4 and 5.

(2) All other words used is these rules but not defined shall have the same meaning as assigned to them in the Karnataka Civil Services (Classification, Control and Appeal) Rules, 1957.

**3. Specific training as an additional qualification.-** These rules shall be in addition to the rules of recruitment specially made in respect of a service or post prescribing completion of specific training specified there under as an essential qualification for promotion. No Government servant shall be eligible for promotion unless he has undergone the training within a period of six months from the date of notification of the training under rule 4.

**Explanation:** In case an occasion of promotion arises between the date of commencement of these rules and the date of issue of notification relating to training under rule 4, promotions may be effected without reference to the training under these rules.

**4. Prescription of training.-** The Secretaries and heads of departments, within a period of three months from the date of commencement of these rules shall, keeping in view the nature of duties attached to the posts in various cadres, the knowledge of various legislations, rules, regulations, executive instructions etc. issued by the Government and domain knowledge which is required to perform duties attached to the posts in each of Group-A, B and C cadres respectively, by notification, specify a set of training courses for each of such cadres. For this purpose, the head of the department may constitute consultative committees comprising such persons as he deems necessary and formulate list of courses for training. The heads of Departments shall be responsible to identify the resource persons and create online training courses for domains particular to that department and also make necessary arrangements to conduct the offline training, as necessary. No Government servant shall be eligible for promotion to the next cadre unless he has undergone at least ten days of offline training as notified, in the year preceding the year of promotion.

**5. Online training.-** In addition to offline training, every Government servant shall compulsorily complete the notified online training courses and earn minimum number of points every year on such online training platform as may be notified by the Department of Personnel and Administrative Reforms (Administrative Reforms).

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**6. Preference of training.-** Every Government employee shall apply for in person training through Integrated Government Online Training (iGOT) platform to the Institute they are supposed to undergo training as per rule 4 and rule 5. Where the Government servants concerned has applied for offline training as notified under rule 4, he shall be sent for training in the order of seniority in the respective cadre.

By Order and in the name of
the Governor of Karnataka,

(Nahid Anjum)
Undersecretary to Government,
DPAR (AR-Training and RTI)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH